ಅಧ್ಯಕ್ಷರು.—ಏತಕ್ಕೋಸ್ಕರ ಹಾಗೆ ಮಾಡಿದರು, ಸರ್ಕಾರ ಅನುಮತಿ ಕೊಟ್ಟಿತ್ತೇ ಎಂದು ಕೇಳುತ್ತಿದ್ದಾರೆ.

ಶ್ರೀ ಜಿ. ಹೆಚ್. ಆಶ್ವತ್ಥರೆಡ್ಡಿ.—ಲಿಂಗನಮಕ್ಕಿಗೆ ವಾಟರ್ ಸಪ್ಲೈ ಮಾಡಬೇಕಾದರೆ ಚಕ್ರ ಡ್ಯಾಂ ಕಟ್ಟಬೇಕಾಗಿತ್ತು. In the meanwhile the experts have given their opinion to have a small dam. *i. e...*

ಅಧ್ಯಕ್ಷರು.—ಎರಡು ಸಾರಿ ಅಣೆಕಟ್ಟು ಕಟ್ಟಿದ್ದಾರೆ, ಈಗ ಮೂರನೇ ಸಾರಿ ಬ್ರೇಕ್ ಆಗಿದೆ. ಯಾತಕ್ಕೋಸ್ಕರ ಕಟ್ಟಿದರು ಎಂದು ಹೇಳಿದ್ದಾರೆ.

ಶ್ರೀ ಜಿ. ಹೆಚ್. ಆಶ್ವತ್ಥರೆಡ್ಡಿ.— ವಾಟರ್ ಡೈವರ್ಟ್ ಮಾಡುವುದಕ್ಕೋಸ್ಕರ.

SRI S. M. SHEERNALLY CHANDRASEKHAR:—Entire scheme is divert the water. ಆ ಪ್ರಶ್ನೆ ಬರಲಿಲ್ಲ. ಒಂದು ಸಲ ಅಣೆಕಟ್ಟು ಆಯಿತು. ಟೆಕ್ನಿಕಲ್ ಎಕ್ಸ್‌ಪರ್ಟ್ಸ್ ಬಂದರು, ಸರಿಯಲ್ಲ ಎಂದು ಒಪಿನಿಯನ್ ಕೊಟ್ಟರು. ಮತ್ತೆ ಕಟ್ಟಿದರು. Repeatedly they are doing that. ಆದ್ದರಿಂದ ಇದರಲ್ಲಿ ಏನು ಆಡಗಿದೆ ಎಂದು ಎಗ್ಸಾಮಿನ್ ಮಾಡುತ್ತೀರಾ ?

ಶ್ರೀ ಜಿ. ಹೆಚ್. ಆಶ್ವತ್ಥರೆಡ್ಡಿ. – ಎರಡನೇ ಸಾರಿ ರಿಜೆಕ್ಟ್ ಆಗಿದೆ. ಇದಕ್ಕೆ ೭೦ ಲಕ್ಷ ರೂಪಾಯಿ ಆಗುತ್ತದೆ, ಫೀಸಿಬಲ್ ಅಲ್ಲ, ಇದು ಬೇಕಾಗಿಲ್ಲ ಎಂದು ಹೇಳಿದ್ದಾರೆ. ಒಂದು ವೇಳೆ ಮಾನ್ಯ ಸದಸ್ಯರು ಹೇಳಿದಂತೆ ಆಂಥಾದ್ದೇನಾದರೂ ಇದ್ದರೆ ಅದನ್ನು ಎಗ್ಸಾಮಿನ್ ಮಾಡಿಸುತ್ತೇನೆ.

Decentralisation of KGID:

64. SRI. S. S. ARAKERI (Balloli).—Will the Minister for Finance and Tourism be pleased to state.—

(a) whether the Governmment took decision in 1976 to decentralise the KGID in view of the Compulsory Life Insurance Scheme for all State Government Servants throughout Karnataka.

(b) whether on account of non-opening of district level offices of the KGID the large numbers of death claims, maturity claims and the loans have not been effectively attend throughout the State causing great hardships to the Government servants as well as the L. R. S. of the deceased Government servants in all 19 Districts in the State.

(c) whether it is a fact that large section of KGID employees are against the decentralisation of KGID and are against for star-the new units as District Head quarters throughout Karnataka.

(d) If no, what steps Government propose to take and when.

(e) the number of SC/ST employees and its percentage in KGID ?

SRI M. VEERAPPA MOILY (Minister for Finance and Tourim).—

(a) Yes.

(b) This is partly true because initially the attention of the District level Offices was on getting most of the

serving Government servants properly insured. Thereafter increasing attention has been given to settlement of death claims, maturity claims and loan claims. Settlement of these claims is under constant review to avoid hardship,

(c) No.

(d) Does not arise.

(e) —

Category of employees	No. of employees working	No. of SC/ST employees working		Percentages of SCs, and STs,	
		SCs	STs	SCs	STs
1	2	3	4	5	6
Class I	2	Nil	Nil	...	...
Class II	26	2	Nil	7.69	Nil
Class III	577	70	2	12.13	0.34
Class IV	84	8	2	9.52	2.38
	689	80	4	11.61	0 58

ಶ್ರೀ ಎಸ್. ಎಸ್. ಆರಕೇರಿ.—ಮಾನ್ಯ ಅಧ್ಯಕ್ಷರೆ, ಸರ್ಕಾರದವರು ೧೯೭೬ರಲ್ಲಿ ಕೆ. ಜಿ. ಐ. ಡಿ. ಯನ್ನು ಡೀಸೆಂಟ್ರಲೈಸ್ ಮಾಡಬೇಕು, ಪ್ರತಿಯೊಂದು ಜಿಲ್ಲೆಯಲ್ಲೂ ಘಟಕ ಸ್ಥಾಪನೆ ಮಾಡಬೇಕು ಎಂದು ತೀರ್ಮಾನ ಮಾಡಿದ್ದರೂ ಕೂಡ, ಈಗ ೧೯೭೬ ರಿಂದ ೧೯೮೧ ಆಯಿತು, ಆದರೂ ಕೂಡ ಆ ಘಟಕಗಳನ್ನು ತೆಗೆಯಲಾರದೆ ಇರುವುದಕ್ಕೆ ಕಾರಣವೇನು ? ಮತ್ತು ನೌಕರರು ಇದಕ್ಕೆ ವಿರುದ್ಧವಾಗಿರುವುದು ನಿಜವೇ ಎಂದು ಕೇಳಿದ್ದಕ್ಕೆ ಇಲ್ಲ ಎಂದು ಹೇಳಿದ್ದೀರಿ, ಹಾಗಾದರೆ ಡಿಲೇ ಆಗಲಿಕ್ಕೆ ನಿಜವಾದಂಥ ಕಾರಣಗಳೇನು ?

ಶ್ರೀ ಎಂ. ವೀರಪ್ಪಮೊಯ್ಲಿ.—೧೯೭೬ನೇ ಇಸವಿಯಲ್ಲಿ ಜಿಲ್ಲಾ ಕಛೇರಿಗಳನ್ನು ನಾವೂ ಪ್ರಾರಂಭಿಸಿದ್ದರೂ ಕೂಡ, ಆಗ ನಾವು ಹೊಸ ವಹಿವಾಟನ್ನು ವಹಿಸಿಕೊಂಡೆವು. ಆ ದೃಷ್ಟಿಯಿಂದ ೧೯೭೬ನೇ ಇಸವಿಯಲ್ಲಿ ಪ್ರಾರಂಭ ಮಾಡಿದ್ದು. ಆದರೆ ಇತ್ತೀಚೆಗೆ ಬರೀ ಹೊಸ ಬಿಸಿನೆಸ್ ಸಾಕಾಗುವುದಿಲ್ಲ, ಅಲ್ಲಿ ಆಯಾ ಜಿಲ್ಲೆಯಲ್ಲಿ ರತಕ್ಕ ಸರ್ಕಾರಿ ನೌಕರರ ಕ್ಲೈಮ್ಸ್ ಮತ್ತು ಪಾಲಿಸಿಗೆ ಸಂಬಂಧಪಟ್ಟ ವ್ಯವಹಾರಗಳನ್ನೂ ಕೂಡ ತೆಗೆದುಕೊಳ್ಳಬೇಕು ಎಂದು ಆ ವ್ಯವಹಾರ ಶುರುಮಾಡಿದ ಮೇಲೆ, ಜಿಲ್ಲಾಕಛೇರಿಗಳು ಚುರುಕಿನಿಂದ ಪ್ರಾರಂಭವಾಗಿವೆ. ಹೊಸ ಬಿಸಿನೆಸ್ ಮತ್ತು ಇನ್ನಿತರ ಹಳೇ ಪಾಲಿಸಿಗಳ ಎಲ್ಲಾ ವಹಿವಾಟುಗಳನ್ನೂ, ಕೂಡ ಆಯಾ ಜಿಲ್ಲಾ ಕಛೇರಿಗಳು ವಿಕೇಂದ್ರೀಕರಣವಾಗಿ ಕೆಲಸಮಾಡುತ್ತಿವೆ.

ಶ್ರೀ ಎಸ್. ಎಸ್. ಆರಕೇರಿ.—ಮೆಚ್ಯೂರಿಟಿ ಕ್ಲೈಮು ಡೆತ್‌ಕ್ಲೈಮ್ ಏನಿದೆ, ಇವನ್ನು ಜಿಲ್ಲಾ ಘಟಕಗಳಲ್ಲಿ ಕೊಡಲಾಗಿದೆ ಹೆಡ್ ಆಫೀಸಿನಲ್ಲಿರುವುದರಿಂದ ಸಾವಿರಾರು ರಿಕಾರ್ಡ್‌ಗಳನ್ನು ಹೆಡ್ ಆಫೀಸಿನಲ್ಲಿ ಬಿದ್ದಿವೆ. ಆದ್ದರಿಂದ ಈ ಕ್ಲೈಮು ಡೀಸೆಂಟ್ರಲೈಸ್ ಮಾಡಿ, ಜಿಲಾ ಘಟಕಗಳಿಗೆ ಕೊಡಂವುದು ಒಳ್ಳೆಯದು.

ಶ್ರೀ ಎಂ. ವೀರಪ್ಪಮೊಯ್ಲಿ.—ಎಲ್ಲಾ ಕ್ಲೈಮುಗಳನ್ನು ಜಿಲ್ಲಾ ಕಛೇರಿಗಳಿಗೆ ಕಳುಹಿಸಬೇಕು. ಪ್ರಾರಂಭದಲ್ಲಿ ಅಲ್ಲಿರತಕ್ಕ ನೌಕರರು ಪ್ರತಿಭಟನೆ ಮಾಡಿದರು. ಜಿಲ್ಲಾ ವಿಕೇಂದ್ರೀಕರಣ ನೀತಿಯನ್ನು

ಸಡಿಲಗೊಳಿಸಲಿಕ್ಕೆ ಆಗುವುದಿಲ್ಲ. ನೌಕರರು ನಾವು ಇದನ್ನು ಹೊಸದಾಗಿ ನೋಡಬೇಕು ಎಂದು ಹೇಳಿದರು. ಇದು ಬಹಳ ಪ್ರಾಮುಖ್ಯವಾದ ವಿಚಾರ. ಆದುದರಿಂದ ಈ ನೀತಿಯನ್ನು ನಾವು ಸಡಿಲಗೊಳಿಸಲಿಕ್ಕೆ ಆಗುವುದಿಲ್ಲ ಎಂದು ಸರ್ಕಾರದವರು ಕಟ್ಟುನಿಟ್ಟಾಗಿ ನಿಂತು ಬಿಟ್ಟಿವು.

There are certain problems like retransfer of office bearers of their association. They are recognised office bearers. ನಾನು ಆದನ್ನು ಒಪ್ಪಿದೆ. ಆಯಾ ಜಿಲ್ಲಾಕಛೇರಿಗಳು ಆಯಾ ಭಾಗದವರ ಕೆಲಸಮಾಡಬೇಕು ಎಂದು ಹೇಳಿದಮೇಲೆ ಒಂದೂವರೆ ತಿಂಗಳು ಪ್ರತಿಭಟನೆ ಮಾಡಿದರು. ಈಗ ಪ್ರತಿಭಟನೆ ನಡೆದಿಲ್ಲ. ಎಲ್ಲಾ ಜಿಲ್ಲಾ ಕಛೇರಿಗಳಲ್ಲಿ ಸರಿಯಾಗಿ ಕೆಲಸ ನಡೆಯುತ್ತಿದೆ. ಏನೆಲ್ಲಾ ಕೆಲಸ ನಿಂತು ಬಿಟ್ಟಿದೆ ಅದನ್ನೆಲ್ಲಾ ಜಿಲ್ಲಾ ಕಛೇರಿಗಳಿಗೆ ಕಳಿಸಿ ವಿಲೇವಾರಿ ಮಾಡಲಿಕ್ಕೆ ಪ್ರಯತ್ನಿಸುಮಾಡುತ್ತೇನೆ.

SRI S. S. ARAKERI.—I must congratulate the Hon'ble Finance Minister. ಅಂದರೆ SC / ST representation Class-1, Class-2, Class-3 ಮತ್ತು Class-4 ನಲ್ಲಿ ಎಷ್ಟಿದೆ. ಕ್ಲಾಸ್-೧ ನಲ್ಲಿ ಒಬ್ಬರೂ ಇಲ್ಲ ಎಂದು ಹೇಳಿದ್ದೀರಿ. ಕ್ಲಾಸ್-೨ ನಲ್ಲಿ ೭ ಪರ್ಸೆಂಟ್. ಕ್ಲಾಸ್-೩ ನಲ್ಲಿ ೧೨ ಪರ್ಸೆಂಟ್, ಕ್ಲಾಸ್-೪ ನಲ್ಲಿ ೯ ಪರ್ಸೆಂಟ್ ಇದೆ ಎಂದು ಹೇಳಿದ್ದೀರಿ ೧೧ ಪರ್ಸೆಂಟ್ ಆವರೇಜ್ ಇದೆ. ಹಾಗಾದರೆ ಕೆ.ಜಿ.ಐ.ಡಿ. ನಲ್ಲಿ ಹರಿಜನಗಿರಿಜನರನ್ನು ಶೇಕಡಾವಾರು ತುಂಬಿಲ್ಲ, ಇದಕ್ಕೆ ಕಾರಣವೇನು ? ಕ್ಲಾಸ್-೪ಗೆ ೯ ಪರ್ಸೆಂಟ್ ಇದೆ. ಕ್ವಾಲಿಫಿಕೇಷನ್ ಬೇಕಾಗಿಲ್ಲ. ಪ್ಯೂನ್, ಆಟೆಂಡರನ್ನು ತೆಗೆದುಕೊಳ್ಳಲಿಕ್ಕೆ ಡಿಗ್ರಿ ಕ್ವಾಲಿಫಿಕೇಷನ್ ಬೇಕಾಗಿಲ್ಲ. ಇದರಲ್ಲಿ ೯ ಪರ್ಸೆಂಟ್‌ಗಿಂತ ಜಾಸ್ತಿ ಏಕೆ ತುಂಬಿಲ್ಲ, ಇದಕ್ಕೆ ಯಾರು ಹೊಣೆಗಾರರು, ಆವರ ಮೇಲೆ ಆಕ್ಷನ್ ತೆಗೆದುಕೊಳ್ಳುತ್ತೀರಾ ? ಕ್ಲಾಸ್-೨ನಲ್ಲಿ ೭ ಪರ್ಸೆಂಟ್ ಇದೆ. ರೆಕ್ರೂಟ್‌ಮೆಂಟ್ ಮಾಡಿ ಸರಿಯಾಗಿ ೧೮ ಪರ್ಸೆಂಟ್ ತುಂಬಲಿಕ್ಕೆ ಏನು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ವೀರಪ್ಪಮೊಯ್ಲಿ.—ಎಸ್. ಸಿ. ಎಸ್. ಟಿ. ಬಗ್ಗೆ ಸಮರ್ಪಕವಾದಂಥ ಪ್ರಾತಿನಿಧ್ಯ ಕ್ಲಾಸ್-೧, ಕ್ಲಾಸ್-೨, ಕ್ಲಾಸ್-೩ ಮತ್ತು ಕ್ಲಾಸ್-೪ನಲ್ಲಿ ಆಗಿಲ್ಲ. Number of Class IV officials were filled up much earlier to the issue of Government order for reservation of SC and ST. ಆದುದರಿಂದ ಅದು ಸಾಧ್ಯವಾಗಲಿಲ್ಲ. ಆದರೆ ಕ್ಲಾಸ್-೧, ಕ್ಲಾಸ್-೨, ಹುದ್ದೆಗಳಿಗೆ ಕ್ಲಾಸ್-೩ ನಿಂದ ಪ್ರಮೋಷನ್ ಆಗಬೇಕು. ಮತ್ತು ಕ್ಲಾಸ್-೩ಗೆ ಪಿ.ಎಸ್.ಸಿ. ಯಿಂದ ಅಪಾಯಿಂಟ್ ಮೆಂಟ್ ಆದರೆ They take State as a unit as far as appintments are concerned. Class I and Class II, Class III ಆದುದರಿಂದ ಸಮರ್ಪಕವಾದಂಥ ಒಂದು ಪ್ರಾತಿನಿಧ್ಯ ಸಿಗಲಿಕ್ಕೆ ಆಗಲಿಲ್ಲ.

ಈ ಸಂದರ್ಭದಲ್ಲಿ, ನಾನು ಒಂದು ಆಶ್ವಾಸನೆಯನ್ನು ಕೊಡಲಿಕ್ಕೆ ಇಚ್ಛಿಸುವುದೇನೆಂದರೆ, ೧-೨-೩ನೇ ದರ್ಜೆ ಹುದ್ದೆಗಳನ್ನು ಬಡ್ತಿ ನೀಡಿ ಭರ್ತಿ ಮಾಡಲಾಗುವುದು ಮತ್ತು ರಿಸರ್ವೇಷನ್ ಪಾಲಿಸಿ ಕೂಡ ಕೆಜಿಐಡಿ ಯಲ್ಲಿ ಸ್ಟ್ರಿಕ್ಟ್ ಆಗಿ ಜಾರಿಗೆ ಬರುವ ಹಾಗೆ ನೋಡುತ್ತೇನೆ.

ಶ್ರೀ ಎಸ್. ಎಸ್. ಆರಕೇರಿ.—ಬಡ್ತಿ ನೀಡುವಾಗ ರಿಸರ್ವೇಷನ್ ಪಾಲಿಸಿಯನ್ನು ಅನುಸರಿಸಲಾಗುವುದು ಎಂದು ಹೇಳಿದಿರಿ. ಆದರೆ ಅಲ್ಲಿ ಹರಿಜನ-ಗಿರಿಜನರಿಗೆ ಸರಿಯಾದ ಪ್ರಾತಿನಿಧ್ಯ ಇಲ್ಲದೆ ಇರುವುದರಿಂದ ಬಡ್ತಿ ನೀಡುವಾಗಲೂ ಸಹ ಇಂಪ್ಲಿಮೆಂಟ್ ಮಾಡುತ್ತಿಲ್ಲ. ಆದ್ದರಿಂದ, ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಂ. ವೀರಪ್ಪ ಮೊಯ್ಲಿ.—ಪ್ರಾತಿನಿಧ್ಯವನ್ನು ನಾವು ಇರತಕ್ಕ ಕಾನೂನು ಪ್ರಕಾರ ಕೊಡಬೇಕಾಗುತ್ತದೆ. ಇನ್ನು ಮುಂದೆ ಹುದ್ದೆಗಳನ್ನು ಭರ್ತಿ ಮಾಡುವಾಗ ತಾವು ಹೇಳಿದ ಸಲಹೆಯನ್ನು ಗಮನದಲ್ಲಿಟ್ಟುಕೊಂಡು ಸ್ಟ್ರಿಕ್ಟ್ ಆಗಿ ರಿಸರ್ವೇಷನ್ ಪಾಲಿಸಿಯನ್ನು ಮೆಯಿಂಟೇನ್ ಮಾಡುತ್ತೇವೆ.